ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ನಂ.4 ಕಟ್ಟಡಗಳ ಉಪವಿಭಾಗ
ಲೋಕೋಪಯೋಗಿ ಇಲಾಖೆ, ಬೆಂಗಳೂರು-560 001.

ದೂರವಾಣಿ ಸಂಖ್ಯೆ: 080-22267585
ಇ-ಮೇಲ್: aeeno4bldg@gmail.com

# ಲೋಕೋಪಯೋಗಿ ಇಲಾಖೆ

ಸಂ: ಸಕಾಅ/ಕಉವಿ-4/ಸ.ಇಂ/ಕ.ದೃಢೀಕರಣ ಪತ್ರ/2022-23/601　　　　ದಿನಾಂಕ: 09/09/2022

ರವರಿಗೆ,

Principal,
Narayana e-Techno School
(Narayana Education Trust),
Laggere, Kempegowda Nagar,
Near Nandini Layout
Bangalore

ಮಾನ್ಯರೆ,

ವಿಷಯ: ಶಾಲಾ ಕಟ್ಟಡದ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡುವ ಬಗ್ಗೆ

ಉಲ್ಲೇಖ: 1. ಪ್ರಾಂಶುಪಾಲರು, Narayana e-Techno School, Bengaluru ರವರ ಪತ್ರ ದಿನಾಂಕ:08.09.2022
2. ಸರ್ಕಾರದ ಸುತ್ತೋಲೆ ಸಂಖ್ಯೆ : ಲೋಇ 59 ಬಿಇಡಿ 2019 ಬೆಂಗಳೂರು ದಿ: 06.05.2022

* * *

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, Narayana e-Techno School, Bengaluru, (Narayana Education Trust), Laggere, Kempegowda Nagar, Near Nandini Layout, Bangalore ಇಲ್ಲಿನ ಶಾಲಾ ಕಟ್ಟಡವನ್ನು ಪರಿಶೀಲಿಸಿ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರ ನೀಡಲು ಕೋರಲಾಗಿರುತ್ತದೆ.

ಅದರಂತೆ, ದಿನಾಂಕ:09.09.2022 ರಂದು ಸಂಬಂಧಪಟ್ಟ ಸಹಾಯಕ ಇಂಜಿನಿಯರ್, ಸದರಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ. ರೂಪ ರವರು ಹಾಜರಿದ್ದು, ಇವರ ಸಮ್ಮೂಖದಲ್ಲಿ ಕಟ್ಟಡದ ಒಳಭಾಗ ಹಾಗೂ ಹೊರಭಾಗವನ್ನು ಪರಿವೀಕ್ಷಣೆ ಮಾಡಲಾಗಿ ವಿದ್ಯಾಸಂಸ್ಥೆಯ ಕಟ್ಟಡವನ್ನು, ಪ್ರಾಪರ್ಟಿ ಸಂ.85/4-230, ಲಗ್ಗೆರೆ, ಕೆಂಪೆಗೌಡ ನಗರ, ನಂದಿನಿ ಲೇಔಟ್ ಹತ್ತಿರ, ಬೆಂಗಳೂರು 2,229.65 ಚ.ಮಿ. (24000.00 ಚ.ಅ) ಜಾಗದಲ್ಲಿ ನಿರ್ಮಿಸಲಾಗಿರುತ್ತದೆ ಮತ್ತು ಕಟ್ಟಡದ ಮಾಲಿಕತ್ವ ಶ್ರೀ. ಯತೀಶ್ ಕುಮಾರ್ S/o ವಿ. ಚಿನ್ನ ನರಸಿಂಹಯ್ಯ, ನಂ.02, 15ನೇ ಮುಖ್ಯ ರಸ್ತೆ, ವೃಷಭವತಿ ನಗರ, ಕಾಮಾಕ್ಷಿಪಾಲ್ಯ ಬೆಂಗಳೂರು-560079 ರವರ ಹೆಸರನಲ್ಲಿರುತ್ತದೆ ಹಾಗೂ Narayana Education Trust ರವರಿಗೆ ಲೀಜ್ ಆಧಾರದ ಮೇಲೆ ವಿದ್ಯಾಸಂಸ್ಥೆಯನ್ನು ನಡೆಸಲು ಅನುಮತಿ ನೀಡಲಾಗಿರುತ್ತದೆ. (ಕರಾರು ಒಪ್ಪಂದ ಸಂ: BK-I-2971/14-15 ದಿನಾಂಕ: 27.06.2014). ಸದರಿ ವಿದ್ಯಾಸಂಸ್ಥೆಯು ಉಪಯೋಗಿಸುವ RCC ಕಟ್ಟಡದ ನೆಲ ಮಹಡಿಯೊಂದಿಗೆ ನಾಲ್ಕು ಅಂತಸ್ತಿನ (ನೆಲ, ಮೊದಲನೇ, ಎರಡನೇ, ಮೂರನೇ ಮತ್ತು ನಾಲ್ಕನೇ ಮಹಡಿ) ಕಟ್ಟಡವಾಗಿದ್ದು, ಪ್ಲಿಂತ್ ಏರಿಯ 698.62 ಚ.ಮಿ (7520.00 ಚ.ಅಡಿ) ಮತ್ತು ಒಟ್ಟು ಫ್ಲೋರ್ ಏರಿಯಾ 3,493.12 ಚ.ಮಿ (37,600.00 ಚ.ಅಡಿ) ಆಗಿರುತ್ತದೆ. ಕಟ್ಟಡದ ಗೋಡೆಗಳನ್ನು ಕಾಂಕ್ರೀಟ್ ಬ್ಲಾಕ್‌ಗಳಿಂದ ನಿರ್ಮಿಸಿದ್ದು, ವಿಟ್ರಿಫೈಡ್ ನೆಲಹಾಸು, ಮರದ ಬಾಗಿಲುಗಳು ಮತ್ತು ಕಬ್ಬಿಣದ ಕಿಟಕಿ ಗಳಿಗೆ ಎಲ್ಯುಮಿನಿಯಂ ಶಟರ್ ಮತ್ತು ಕಬ್ಬಿನದ ಗ್ರಿಲ್ ಗಳನ್ನು ಅಳವಡಿಸಲಾಗಿರುತ್ತದೆ.

ಮುಂದುವರೆದು ಸದರಿ ಕಟ್ಟಡದ Structural Framework ಹಾಗೂ ಕಟ್ಟಡದ ಎಲ್ಲಾ ಮಹಡಿಗುಳು . ಮತ್ತು ಪ್ರಮುಖ ಭಾಗಗಳನ್ನು ಪರಿಶೀಲಿಸಲಾಯಿತು. ಈ ಸಮಯದಲ್ಲಿ ತಳಪಾಯದ ವ್ಯವಸ್ಥೆಯಲ್ಲಿ Unequal settlement ಗಳಾಗಲೀ ಕಂಡು ಬಂದಿರುವುದಿಲ್ಲ ಮತ್ತು Beam ಗಳಲ್ಲಿ Deflection ಕಂಡುಬಂದಿರುವುದಿಲ್ಲ.

ಸದರಿ ಕಟ್ಟಡದ ಕಾಮಗಾರಿಯು 2013ನಲ್ಲಿ ನಿರ್ಮಾಣ ಕಾಮಗಾರಿಯನ್ನು ಮುಕ್ತಾಯಗೊಂಡಿರುತ್ತದೆ ಎಂದು ಸದರಿ ಸಂಸ್ಥೆಯ ಪ್ರಾಂಶುಪಾಲರಾದ ಶ್ರೀಮತಿ. ರೂಪ ರವರು ತಿಳಿಸಿರುತ್ತಾರೆ. ಸದರಿ ಕಟ್ಟಡದಗಳ ಆಯಸ್ಸು 05 ವರ್ಷಕ್ಕಿಂತ ಮೇಲ್ಪಟ್ಟಿದ್ದು ಸಕ್ಷಮ ಪ್ರಾಧಿಕಾರದಿಂದ ಪಡೆದ ಮಂಜೂರಾತಿ ನಕ್ಷೆಯು ಲಭ್ಯವಿರುವುದಿಲ್ಲವೆಂದು ತಿಳಿಸಿರುತ್ತಾರೆ ಮತ್ತು ಕಟ್ಟಡಕ್ಕೆ ಸಂಬಂಧಪಟ್ಟ ಕಾಂಕ್ರೀಟ್ ಗ್ರೇಡ್, ಸ್ಟೀಲ್, ಸಿಮೆಂಟ್, ಮರಳು ಇತ್ಯಾದಿ ಕಟ್ಟಡ ನಿರ್ಮಾಣ ಕಾಮಗಾರಿಗೆ

ಅಳವಡಿಸುವ ಸಾಮಾಗ್ರಿಗಳ ಪರೀಕ್ಷೆ ವರದಿಗಳು ಇಲ್ಲದಿರುವ ಕಾರಣದಿಂದ ಸರ್ಕಾರದ ಸುತ್ತೋಲೆಯಲ್ಲಿ ಸೂಚಿಸಿರುವಂತೆ ಎರಡು ರೀತಿಯ Non Destructive test ಗಳನ್ನು ಕೈಗೊಳ್ಳಲಾಗಿರುತ್ತದೆ.

ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಾಭಾರತಿ ಆವರಣ, ಮೈಸೂರು ರಸ್ತೆ, ಬೆಂಗಳೂರು ಇಲ್ಲಿ ಸಿವಿಲ್ ಇಂಜಿನಿಯರಿಂಗ್ ಡಿಪಾರ್ಟ್‌ಮೆಂಟ್ ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಡಾ॥ ಕಿರಣ್.ಟಿ, Asst. Professor, ಡಾ॥ ಎನ್.ಜಯರಾಮಪ್ಪ, Professor ಮತ್ತು ಡಾ॥ ಸಾದತ್ ಆಲಿ ಖಾನ್ ಯ್ಯೆ, Professor ರವರುಗಳು ಸದರಿ ಶಾಲಾ ಕಟ್ಟಡಕ್ಕೆ Non Destructive test ಅಡಿಯಲ್ಲಿ Rebound hammer test/Ultrasonic pulse velocity test ಗಳನ್ನು ನಿರ್ವಹಿಸಿ ಅದರ ವರದಿಗಳನ್ನು ದಿನಾಂಕ 08.09.2022 ರಂದು ಸಲ್ಲಿಸಿರುತ್ತಾರೆ ಹಾಗೂ ಫಲಿತಾಂಶವು ತೃಪ್ತಿಕರವಾಗಿರುತ್ತದೆ.

ಸದರಿ ವಿದ್ಯಾಸಂಸ್ಥೆ ರವರು ಉಲ್ಲೇಖಿತ(2)ರ ಸರ್ಕಾರದ ಸುತ್ತೋಲೆ ಅನ್ವಯ ಕಟ್ಟಡ ಮೌಲ್ಯಾಪನ ಶುಲ್ಕ ರೂ. 5000.00 ಗಳನ್ನು ವಿಭಾಗ ಕಛೇರಿಗೆ ದಿನಾಂಕ: 06.06.2022 ರಂದು ಕಜಾನೆ–2 ಚಲಾನ್ ಸಂ. CR0622021600182714 ಮೂಲಕ ಪಾವತಿಸಿರುತ್ತಾರೆ.

ಈ ಮೇಲ್ಕಂಡ ಎಲ್ಲಾ ಅಂಶಗಳು ಹಾಗೂ ದಿ:09.09.2022ರ ಪರಿವೀಕ್ಷಣೆ, ಚೆಕ್‌ಲಿಸ್ಟ್‌ನ ವರದಿ ಹಾಗೂ ಸಲ್ಲಿಸಿರುವ ದಾಲೆಗಳ ಹಿನ್ನೆಲೆಯಲ್ಲಿ ಸದರಿ ಕಟ್ಟಡವು ಸುರಕ್ಷಿತವಾಗಿದೆ ಎಂದು ಅಭಿಪ್ರಾಯಿಸಲಾಯಿತು. ಅದರೆ ಕಟ್ಟಡದಲ್ಲಿ ನೀರಿನ ಸೋರುವಿಕೆ ತಡೆಗಟ್ಟುವ, ವಿದ್ಯಾರ್ಥಿಗಳ ಸುರಕ್ಷತೆಗೆ ಅಗತ್ಯ ಕ್ರಮಗಳು ಮತ್ತು ಎಲ್ಲಾ ನಿರ್ವಹಣೆ ಕಾರ್ಯಗಳ ಜವಾಬ್ದಾರಿಯು, ಸದರಿ ಶಾಲೆಯವರದಾಗಿರುತ್ತದೆ. ಹಾಗೂ ಈ ಪ್ರಮಾಣಪತ್ರವನ್ನು ಯಾವದೇ ಸಮಯದಲ್ಲಿ ಹಿಂಪಡೆಯುವ ಷರತ್ತಿಗೊಳಪಟ್ಟಿರುತ್ತದೆ. ಮುಂದುವರೆದು ಕಟ್ಟದ ಮಂಜೂರಾದ ನಕ್ಷೆಗೆ ವಿರುದ್ಧವಾಗಿ ಯಾವುದಾದರು ಬದಲಾವಣೆ ಅಥವಾ ನಿರ್ಮಾಣ ಮಾಡಿದ್ದಲ್ಲಿ, ಸದರಿ ಪ್ರಮಾಣ ಪತ್ರವು ತನ್ನಿಂತಾನೆ ರದ್ದುಗೊಳ್ಳುವುದು. ಸದರಿ ಪ್ರಮಾಣ ಪತ್ರವನ್ನು Narayana e-Techno School, Bengaluru, (Narayana Education Trust), Laggere, Kempegowda Nagar, Near Nandini Layout, Bangalore ರವರಿಗೆ ಶೈಕ್ಷಣಿಕ ಉದ್ದೇಶಕ್ಕಾಗಿ ಮಾತ್ರ ಬಳಸಬಹುದಾಗಿರುತ್ತದೆ. ಅದರಂತೆ, ಸದರಿ ಶಾಲಾ ಕಟ್ಟಡಕ್ಕೆ ಸುರಕ್ಷತಾ ಪ್ರಮಾಣ ಪತ್ರವನ್ನು ನೀಡಲಾಗಿದೆ.

ಸಹಾಯಕ ಕಾರ್ಯಪಾಲಕ ಅಭಿಯಂತರರು,
ನಂ.4 ಕಟ್ಟಡಗಳ ಉಪವಿಭಾಗ, ಬೆಂಗಳೂರು.

R mitter's copy

| ಚಲನ್ ಚಾಲ್ತಿ ಅವಧಿ **Challan Validity** | ಜಿಲ್ಲೆ **District** | ಇಲಾಖೆ **Department** | ಡಿಡಿಓ ಕಚೇರಿ **DDO Office** | |
|---|---|---|---|---|
| 7 Days | BENGALURU URBAN | PUBLIC WORKS DEPARTMENT | NO. 1, BUILDINGS DIVISION, PUBLIC WORKS DEPARTMENT, BANGALORE | |
| ವರ್ಗ **Category** | ದಿನಾಂಕ **Date** | ಚಲನ್ ಉಲ್ಲೇಖ ಸಂಖ್ಯೆ **Challan Reference Number** | ಡಿಡಿಓ ಕೋಡ್ **DDO Code** | |
| Government | 06/06/2022 | CR0622021600182714 | 219820 | |
| ಸಂದಾಯದಾರನ ಹೆಸರು **Remitter Name** | NARAYANA ETECHNO SCHOOL | | ಮೊಬೈಲ್ ಸಂಖ್ಯೆ **Mobile Number** | 9880211993 |
| ವಿಳಾಸ **Address** | KEMPEGOWDA NAGAR, NEAR NANDHINI LAYOUT, BANGALORE | | | |
| ಉದ್ದೇಶ **Purpose** | ಲೆಕ್ಕ ಶೀರ್ಷಿಕೆ **Head of Account** | ಉಪ ಉದ್ದೇಶದ ಹೆಸರು **Sub Purpose Name** | ಉದ್ದೇಶ ನಿರ್ದಿಷ್ಟ ಐಡಿ **Purpose Specific ID** | ಮೊತ್ತ **Amount** |
| OTHER ITEMS | 0216~01~700~0~02~000 | NA | NA- | 5000 |
| ಸಂದಾಯದ ಬ್ಯಾಂಕ್ **Remittance Bank** | STATE BANK OF INDIA | ಒಟ್ಟು ಮೊತ್ತ **Grand Total** | | 5000 |
| ಪಾವತಿ ಹಂತ **Payment Status** | **Payment Yet To Be Made At Agency Bank** | ಒಟ್ಟು ಮೊತ್ತ ಅಕ್ಷರಗಳಲ್ಲಿ **Total Amount in Words** | | Five Thousand Only |
| ಪಾವತಿ ವಿವರಗಳು\Payment Details | | | | |
| ಪಾವತಿ ವಿಧ **Payment Mode** | **Cash** | | | |

SBI ಭಾರತೀಯ ಸ್ಟೇಟ್ ಬ್ಯಾಂಕ್ भारतीय स्टेट बैंक Mysore Bank Circle Branch P.F.No. 6254667 Harey Krishna Singh B'luru 560009 06 JUN 2022 Br Code 40007 CASH PAID | RECEIVED | TRANSFER Maker Checker - 1 Checker - 2

18821912